'ಆಮೇಲೆ ಮುಂದೇನು? ಎಂದು ಕೇಳಿದ ಬ್ರಮಾ ಗಿಲ್ನ್ಸ್ಕಿ ಮನಸ್ಸಿನಲ್ಲೇ 'ಈಗ ಇವನು ಸಾಯ್ತಿದ್ದಾನೆ. ಜೀವನದಲ್ಲಿ ಮೊದಲ ಬಾರಿಗೆ ಕಾಯಿಲೆ ಬಿದ್ದಿದ್ದಾನೆ. ಈಗ ತನ್ನ ಸ್ಥಿತಿ ಕಟ್ಟಕಡೆಗೆ ತಲುಪ್ತಿದೆ ಅನ್ನೊ ಅರಿವು ಇವನಿಗೆ ಬಂದಿದೆ...' ಎಂದುಕೊಳ್ಳುತ್ತ,

'ಇಲ್ಲ... ಹುಡುಗಾ... ಯಾವ ಕಾಲರಾ ಕೂಡ ನಿನ್ನಂಥ ಎಮ್ಮೆಯನ್ನ ಹೊತ್ತುಕೊಂಡುಹೋಗಲಾರದು... ನೀನು ನೂರು ವರ್ಷ ಬದುಕಬೇಕು... ಹೇಳು ಎಲ್ಲಿ ನೋವಾಗ್ತಿದೆ ನಿನಗೆ?' ಎಂದು ಕೇಳಿದ.

'ನೋವಿಲ್ಲ... ಆದರೆ ಅನುಭವಿಸ್ತಿದ್ದೇನೆ...'

'ನಿನಗೇನೂ ಅನುಭವಕ್ಕೆ ಬರ್ತಿಲ್ಲ... ತುಂಬ ಆರೋಗ್ಯವಾಗಿದ್ರೆ ಇಂಥವೆಲ್ಲ ಅನುಭವಕ್ಕೆ ಬರ್ತಾವೆ. ನಿನ್ನ ಹೆಚ್ಚುವರಿ ಚೈತನ್ಯ ನಿನ್ನ ಆಲೋಚನೆಗಳನ್ನ ತಲೆಕೆಳಗು ಮಾಡ್ತಿದೆ. ನೀನು ಇವತ್ತು ಕಂಠಪೂರ್ತಿ ಕುಡೀಬೇಕು... ನಿನ್ನ ಒಳಗೆ ಬರಿದಾಗಿರೋದೆಲ್ಲ ಪೂರಾ ತುಂಬಿಕೊಳ್ಳೋವರೆಗೂ ಭರಪೂರ ಕುಡೀಬೇಕು. ಕುಡಿಯೋದು... ತುಂಬಿಸಿಕೊಳ್ಳೋದು ಒಂದು ರೀತಿ ಚೇತೋಹಾರಿ ಅನುಭವ... ಡಾನ್‌ನ ರಾಸ್ಟೋವ್‌ನಲ್ಲಿ ನೀನು ಹೇಗೆ ಮೋಸ ಹೋದೆ ನೆನಪಿದೆಯಾ? ದೇವರೇ! ಇದು ಹೊಳೆದದ್ದೇ ತಡ ಎಲ್ಲ ನೆನಪಾಗ್ತಿದೆ. ಅವತ್ತು ಶಷ್ಕ ಮತ್ತು ನಾನು ಬ್ಯಾರೆಲ್‌ಗಳಲ್ಲಿ ವೈನ್ ಸಾಗಿಸ್ತಿದ್ವಿ. ಅದನ್ನೆಲ್ಲ ನೀನು ಒಬ್ಬನೇ ಕುಡಿದು ಖಾಲಿ ಮಾಡಿ ಮತ್ತೆ ರಮ್ ಬೇಕು ಅಂತ ಹೇಳಿ ಕಳುಹಿಸಿದ್ಯಲ್ಲ... ನೆನಪಿಸ್ಕೊ... ನೀನು ಅಷ್ಟು ಕುಡೀತಿದ್ದೆ. ಹಗಲು ರಾತ್ರಿ ಬುಡಮೇಲು ಮಾಡೋ ಹಾಗೆ, ದೆವ್ವಗಳು ಮೈ ಹೊಕ್ಕಿವೆಯೇನೊ ಅನ್ನೋಹಾಗೆ ಕುಡೀತಿದ್ದೆ. ನೆನಪಿದೆಯಾ? ಆಮೇಲೆ ನೀನು ಗ್ರೀಕರನ್ನ ಬಡಿದು ಹಾಕಬೇಕು ಅಂತ ಹೊರಟಿದ್ದೆ...'

ಈ ಎಲ್ಲ ಕೇಳುತ್ತಲೇ ಶಿಚಿಪ್‌ತ್ಸೋವ್‌ನ ಮುಖ ಅರಳಿ ಕಣ್ಣುಗಳು ಹೊಳೀಲಿಕ್ಕೆ ಆರಂಭಿಸಿದವು.

'ಮ್ಯಾನೇಜರ್ ಸಾವೋಕಿನ್ನನ್ನ ನಾನು ಹೇಗೆ ಹೊಡೆದೆ ಅನ್ನೋದು ನಿನಗೆ ನೆನಪಿದೆಯಾ?' ಶಿಚಿಪ್‌ತ್ಸೋವ್ ಮಣಮಣಿಸುತ್ತ ತಲೆ ಎತ್ತಿ ಕೇಳಿದ.

'ಆದರೆ ಆ ಹೊತ್ತು, ಮೂವತ್ಮೂರು ಮ್ಯಾನೇಜರ್‌ರನ್ನ ಹೊಡೆದು ಉರುಳಿಸಿದ್ದೆ. ಅದರಲ್ಲೆಲ್ಲ ನಾನು ಕಡಿಮೆ ಹೊಡೆದದ್ದು ಯಾರಿಗೆ ಅನ್ನೋದು ನನಗೆ ನೆನಪಿಲ್ಲ. ಅದರಲ್ಲೂ ಅವರೆಲ್ಲ ಎಂಥಾ ಮ್ಯಾನೇಜರ್‌ಗಳು! ಗಾಳಿಯನ್ನೂ ಅವರು ತಮ್ಮ ಮೈ ಸೋಕೋಕೆ ಬಿಡ್ತಿರಲಿಲ್ಲ. ಅಂಥವರು ಅವರು! ಅಷ್ಟೇ ಅಲ್ಲ ನಾನು ಪ್ರತಿಷ್ಠಿತ ಇಬ್ಬರು ಸಾಹಿತಿಗಳನ್ನ ಹಾಗೂ ಒಬ್ಬ ಪೇಂಟರ್‌ನ ಹೊಡೆದು ಉರುಳಿಸಿದ್ದೇನೆ...'

'ಅದ್ಸರಿ ಈಗ ಯಾಕೆ ಅಳ್ತಿರೋದು?' ಬ್ರಮಾ ಗಿಲ್ನ್ಸ್ಕಿ ಕೇಳಿದ.

'ಕೆರಸ್‌ನಲ್ಲಿ ನಾನು ನನ್ನ ಮುಷ್ಟಿಯಿಂದ ಗುದ್ದಿ ಒಂದು ಕುದುರೇನ ಕೊಂದೆ. ಆಮೇಲೆ ತಗಂರೋಗ್‌ನಲ್ಲಿ ಕೆಲವು ದಾಂಡಿಗರು ರಾತ್ರಿ ಹೊತ್ತು ನನ್ನ ಮೇಲೆ ಆಕ್ರಮಣ ಮಾಡಿದರು. ಹದಿನೈದು ಜನ. ಆದರೆ ನಾನು ಅವರ ಕ್ಯಾಪ್‌ಗಳನ್ನ ಎತ್ತಿಟ್ಟುಕೊಂಡುಬಿಟ್ಟೆ. ಆಮೇಲೆ ಅವರು ನನ್ನ ಹಿಂದೆ ಬಿದ್ದು 'ನಮ್ಮ ಕ್ಯಾಪ್‌ಗಳನ್ನ ವಾಪಸ್ ಕೊಟ್ಟುಬಿಡಿ' ಅಂತ ಅಂಗಲಾಚಲಿಕ್ಕೆ ಶುರು ಮಾಡಿದ್ರು. ಹಾಗೆ ನಾನು ಅವರಿಗೆಲ್ಲ ಚಳ್ಳೆಹಣ್ಣು ತಿನ್ನಿಸಿದ್ದೆ...' ಶಿಚಿಪ್‌ತ್ಸೋವ್ ಹೇಳಿದ.

'ಅದ್ಸರಿ ಆದರೆ ಅಳ್ತಿರೋದು ಯಾಕೆ? ಹೀಗಾದರೆ ನೀನು ನಿಜಕ್ಕೂ ಸಿಲ್ಲಿ...'

'ಆದರೆ ಈಗ ಎಲ್ಲ ಮುಗಿದಿದೆ... ಇದು ನನ್ನ ಅನುಭವಕ್ಕೆ ಬಂದಿದೆ... ನಾನು ವ್ಯಾಜ್ಮಾಗೆ ಹೋಗೋದಾದರೆ...'